**ಸಾಕ್ಷಿಗೆ ದಿನಾಂಕಃ30-06-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಪಿರ್ಯಾದುದಾರರ ಪರ ಶ್ರೀ. BPR ವಕೀಲರಿಂದ ::**

ನಾನು ದ್ವಿತೀಯ ಪಿ ಯು ಸಿ ವಿದ್ಯಾಭ್ಯಾಸವನ್ನು ತರೀಕೆರೆಯಲ್ಲಿ ಮಾಡಿರುತ್ತೇನೆ. ನನ್ನ ತಂದೆ 2003 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ ಆಗಿರುತ್ತೇನೆ. 2003 ರ ನಂತರ ಕುಟುಂಬದ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ 6 ಎಕರೆ ಅಡಿಕೆ ತೋಟ ಇರುತ್ತದೆ. ನನಗೆ ನೆರಳಕೆರೆಯ ಕೆನರಾ ಬ್ಯಾಂಕ್ ಖಾತೆ ಇದ್ದು ಸದರಿ ಬ್ಯಾಂಕ್ ನಲ್ಲಿ ನಾನು 10 ಲಕ್ಷ ಸಾಲವನ್ನು ಪಡೆದಿರುತ್ತೇನೆ. ಸದರಿ ಸಾಲವನ್ನು ಮೂಲತಃ ನನ್ನ ತಂದೆ ಮಾಡಿದ್ದು, ಅವರು ಮೃತರಾದ ನಂತರ ಸದರಿ ಸಾಲವನ್ನು ನಾನು ನವೀಕರಣ ಮಾಡಿಕೊಂಡು ಬಂದಿರುತ್ತೇನೆ.

ನನ್ನ ಬ್ಯಾಂಕ್ ಖಾತೆಯು ಕಾವೇರಿ ಗ್ರಾಮೀಣ ಬ್ಯಾಂಕ್ ಅಮೃತಪುರ ಶಾಖೆಯಲ್ಲಿ ಇರುತ್ತದೆ. ನಾನು ನನ್ನ ಬ್ಯಾಂಕ್ ಗೆ 15.04.2019 ರಂದು ನನ್ನ ಚೆಕ್ ಕಳೆದು ಹೋಗಿರುತ್ತದೆ ಎಂದು ಪತ್ರ ಬರೆದಿರುತ್ತೇನೆ ಎಂದರೆ ಸರಿ. ಸದರಿ ಪತ್ರವನ್ನು ನಾನು ಕೈ ಬರವಣಿಗೆಯಲ್ಲಿ ಬರೆದು ಕೊಟ್ಟಿರುತ್ತೇನೆ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಡಿ1 ರಲ್ಲಿ ಯಾವ ಸಂಖ್ಯೆಯ ಚೆಕ್ ಕಳೆದು ಹೋಗಿರುತ್ತದೆ ಎಂದು ನಿಖರವಾಗಿ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಬ್ಯಾಂಕ್ ಗೆ ನೀಡಿದ ಪತ್ರದಲ್ಲಿ ಚೆಕ್ ನಂಬರ್ ಅನ್ನು ನಮೂದು ಮಾಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಬ್ಯಾಂಕ್ ನಲ್ಲಿ ವಿಚಾರ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

ನಾನು ಪಿರ್ಯಾದುದಾರರಿಗೆ ನೀಡಿದ ಚೆಕ್ ನನ್ನ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದ ಹಿಂತಿರುಗಿದ್ದು ಅದಕ್ಕೆ ಸಂಬಂಧಪಟ್ಟಂತೆ ಪಿರ್ಯಾದುದಾರರು ನನಗೆ ಪ್ರಕರಣ ಹೂಡುವ ಪೂರ್ವದಲ್ಲಿ ನೋಟೀಸ್ ಅನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ ನನಗೆ ನಿಪಿ4 ರಂತೆ 09.04.2019 ರಂದು ಜಾರಿ ಆಗಿರುತ್ತದೆ ಎಂದರೆ ಸರಿ. ಸದರಿ ನೋಟಿಸ್ ಜಾರಿಯಾದ ನಂತರದಲ್ಲಿ ನಾನು ನನ್ನ ವಕೀಲರನ್ನು ಭೇಟಿ ಮಾಡಿರುತ್ತೇನೆ ಎಂದರೆ

ಸರಿ. ನಂತರದಲ್ಲಿ ನಾನು ಬ್ಯಾಂಕ್ ಗೆ ನನ್ನ ಚೆಕ್ ಕಳೆದು ಹೋಗಿರುವುದಾಗಿ ಮೇಲೆ ಹೇಳಿದ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ1 ರಂತೆ ನನ್ನ ಬ್ಯಾಂಕ್ ಗೆ ನಾನು ದಿಃ 15.04.2019 ರಂದು ನನ್ನ ಚೆಕ್ ಕಳೆದು ಹೋಗಿರುವುದಾಗಿ ಪತ್ರ ಬರೆದಿದ್ದೆ ಎಂದರೆ ಸರಿ. ನಂತರದಲ್ಲಿ 25.04.2019 ರಂದು ನಿಡಿ2 ರಂತೆ ಪಿರ್ಯಾದುದಾರರಿಗೆ ಮರು ಉತ್ತರವನ್ನು ನನ್ನ ವಕೀಲರ ಮುಖಾಂತರ ಕೊಡಿಸಿರುತ್ತೇನೆ ಎಂದರೆ ಸರಿ. ನಿಪಿ1 ಚೆಕ್ ಅನ್ನು ನನ್ನ ಚೆಕ್ ಪುಸ್ತುಕದಿಂದ ತೆಗೆದುಕೊಟ್ಟಿರುತ್ತೇನೋ ಅಥವಾ ಪ್ರತ್ಯೇಕವಾಗಿ ಇಟ್ಟುಕೊಂಡಿರುತ್ತೆನೋ ಎಂದರೆ ಸಾಕ್ಷಿಯು ಸದರಿ ಚೆಕ್ ನನ್ನ ಜೇಬಿನಲ್ಲಿ ಇಟ್ಟಿದ್ದು ಅದು ಬಿದ್ದು ಕಳೆದು ಹೋಗಿರುತ್ತದೆ. ನಿಪಿ1 ಚೆಕ್ ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಚೆಕ್ ಆಗಿರುತ್ತದೆ ಎಂದರೆ ಸರಿ. ನಿಪಿ1 ರಲ್ಲಿ ನನ್ನ ಹೆಸರು ಕಂಡು ಬರುವುದಿಲ್ಲ ಎಂದರೆ ಸರಿ. ಆದಕಾರಣ ನಿಪಿ1 ಚೆಕ್ ನನಗೆ ಸೇರಿದ ಚೆಕ್ ಎಂದು ಬೇರೆ ಇತರೇ ವ್ಯಕ್ತಿಗೆ ಗೊತ್ತಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ಚೆಕ್ ಅನ್ನು ಪಿರ್ಯಾದುದಾರರು ದುರ್ಬಳಕೆ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಬ್ಯಾಂಕ್ ಗೆ ಆಗಲೇ ನನ್ನ ಚೆಕ್ ಕಳೆದ ಬಗ್ಗೆ ದೂರು ನೀಡಿದ ಕಾರಣ ಪೊಲೀಸರಿಗೆ ಪ್ರತ್ಯೇಕ ದೂರು ನೀಡಿರುವುದಿಲ್ಲ.

ದಿಃ 12.03.2019 ರಂದು ಪಿರ್ಯಾದುದಾರರಿಂದ 6 ಲಕ್ಷ ರೂಪಾಯಿ ಎಂದು ಬರೆದು ನಿಪಿ1 ಚೆಕ್ ಅನ್ನು ಸಾಲದ ಮರು ಪಾವತಿ ಬಾಬ್ತು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭಾದ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ರಲ್ಲಿ ಇರುವ ಸಹಿ ನನ್ನದಾಗಿರುವುದಿಲ್ಲ. ಸಾಕ್ಷಿಗೆ ನಿಪಿ4 ತೋರಿಸಲಾಗಿ ಅದರಲ್ಲಿ ಇರುವ ಸಹಿ ಸಹ ಅವರದ್ದಾಗಿರುವುದಿಲ್ಲ ಎಂದು ನುಡಿದಿರುತ್ತಾರೆ.

ಪಿರ್ಯಾದುದಾರರಿಗೆ ಹಣ ಮರು ಪಾವತಿ ಮಾಡಬೇಕಾಗುತ್ತದೆ ಎನ್ನುವ ಕಾರಣದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಪಿರ್ಯಾದುದಾರರು ಕಳೆದ 10 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈ ಪ್ರಕರಣ ದಾಖಲಾದ ನಂತರದಲ್ಲಿ ನನಗೆ ಪಿರ್ಯಾದುದಾರರು ಯಾರು ಎಂದು ತಿಳಿದು ಬಂದಿರುತ್ತದೆ. ನಿಪಿ1 ಚೆಕ್ ಹಾಗೂ ಅದರಲ್ಲಿ ಇರುವ ಸಹಿ

ನನ್ನದಾಗಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ನಿಪಿ4 ರಲ್ಲಿ ಇರುವ ಸಹಿ ಸಹ ನನ್ನದಾಗಿದ್ದರೂ ಸಹ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಲದ ಭಾದ್ಯಸ್ತಿಕೆಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ನಿಡಿ1 ಮತ್ತು 2 ನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರಿಂದ ಪಡೆದ ಸಾಲದ ಹಣವನ್ನು ಮರು ಪಾವತಿ ಮಾಡಲು ನಾನು ಭಾದ್ಯಸ್ತನಾಗಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::